ಟಿ.ಎಂ. ಮಾನಪ್ಪ, ಶಿವಮೊಗ್ಗ
ನಾಲ್ಕು ತುಟಿಗಳು ಸೇರಿದರೆ ಪ್ರೀತಿಯೋ, ಪ್ರಳಯವೋ?



ಕಣ್ಣನ್ನು ಗಮನಿಸಿ; ಮುಚ್ಚಿದ್ದರೆ ಪ್ರೀತಿ; ಬಿಟ್ಟಿದ್ದರೆ ಘನಘೋರ ಪ್ರಳಯ.

ಎಚ್.ಕೆ. ವಿಜಯಕುಮಾರ್, ಶಕ್ತಿನಗರ
ಪಾತಕಿಗಳು ಪಾತಾಳಕ್ಕಿಳಿಸಿ ಪಾಷಾಣವಿಕ್ಕಿ ಪ್ರಾಣ ತೆಗೆದರೂ ಎಸ್ನಾತ್ಮ ಕನ್ನಡವೆಂದು ಪ್ರತಿಧ್ವನಿಪುದೆಂಬರು ಈಗ ಸಿಗುವರೆ?
ಚಂದಾಗಾಗಿ ಇನ್ನೂ ಚಂದದ ನುಡಿಗಳಂ ಪೇಳ್ವ ಪಡೆಗಳೇ ಇರ್ಪುದು.

ರಾಜಶೇಖರ ಹಾದಿಮನಿ, ಧಾರವಾಡ
ರಾಜಕಾರಣಿಗಳಿಗೆ 'ರಾಸಲೀಲೆ' ಬಿಟ್ಟರೆ 'ರಾಜಶೀವಿ' ಗೊತ್ತೇ ಇಲ್ವೇ? ನೀವಾದರೂ ಬುದ್ಧಿ ಹೇಳಿ.
ಛಿ! ಪ್ರಾಣಿಗಳಿಗೆ ಬುದ್ಧಿ ಹೇಳಬಾರದು, ಬರೆ ಹಾಕಬೇಕು. ಆಗುತ್ತಿಲ್ಲವಲ್ಲಾ... ಅಕಟಕಟಾ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಚಿಕ್ಕವರಿಗೂ ವೃದ್ಧರಿಗೂ ಅಂತರವೇನು ಸರ್?



ಇವರಿಗೆ ಚಿಕ್ಕ worry, ಅವರಿಗೆ ದೊಡ್ಡ worry.

ಕೆ.ವಿ. ಗೋವಿಂದಾಚಾರಿ, ಮೈಸೂರು
ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ ಅನೇಕ ಶ್ರೇಷ್ಠರು ಅವಿವಾಹಿತರಾಗಿರುತ್ತಾರೇಕೆ?
'ನಿಮ್ಗೊಂಚೂರೂ ಬುದ್ಧಿಯಿಲ್ಲ' ಎಂದು ಪದೇ ಪದೇ ಅನ್ನಿಸಿಕೊಳ್ಳಲು ಇಷ್ಟವಿಲ್ಲದ್ದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ತಾಳಿ ಗಟ್ಟಿಯಾಗಿರಲು ಮೂರು ಗಂಟು. ರಾಜಕೀಯ ಪಕ್ಷ ಗಟ್ಟಿಯಾಗಿರಲು?
ಕಳ್ಳ ಸುಳ್ಳ ದುರುಳರ ನಂಟು.

ಮಹಾವೀರ ಕಾಸರ, ಶಿವಮೊಗ್ಗ
ಸಲಿಗೆಯಿಂದ ಇದ್ದರೆ ಮೀನಿನ ಬುಟ್ಟಿಗೆ ಕೈ ಹಾಕುತ್ತಾರೆ ಎನ್ನುವುದೇಕೆ?
ಬುಟ್ಟಿಗೆ ಹಾಕಿಕೊಳ್ಳಲು ಮೀನ್ ಮೆಂಟಾಲಿಟಿ ಬಳಸುವುದರಿಂದ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಭೂಮಂಡಲಕ್ಕೆ ಮತ್ತೆ ಯಾವುದಾದರೂ ಆಪತ್ತು ಬರಬಹುದೆ?
ಬಂದದ್ದೇ ಹೋಗಿಲ್ಲವಲ್ಲ! ಭೂಮಂಡಲದ ಅತಿ ದೊಡ್ಡ ಆಪತ್ತು ಮನುಷ್ಯನೇ.

ಬಿ. ಚಂದ್ರೇಗೌಡ, ಬೆಂಗಳೂರು
ಲೋಕಾಂತಕ್ಕೂ ಏಕಾಂತಕ್ಕೂ ಏನು ವ್ಯತ್ಯಾಸ?
ಏಕಾಂತದಲ್ಲಿ ಲೋ ಕಾಂತ ಎನ್ನಿಸಿಕೊಳ್ಳುವುದು ಬಲು ಚೆನ್ನ.

ಮೋಹನರಾಜು ಎಸ್.ಎ., ಶಂಕರಘಟ್ಟ
ಕಿಡಿಯಿಂದ ಕಾಡನ್ನು ಸುಡಬಹುದು. ಸವಿನುಡಿಯಿಂದ?
ಸುಟ್ಟ ಕಾಡನ್ನು ಲೇಔಟ್ ಮಾಡಿ ಮಾರ್ಕೆಟ್ ಮಾಡಬಹುದು.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ
ವಯಸ್ಸಾದಂತೆ ವ್ಯಕ್ತಿ ಏಕೆ ಮಾತು ಕಡಿಮೆ ಮಾಡುತ್ತಾನೆ?
ಬೇಗ ಸುಸ್ತಾಗುತ್ತಲ್ಲ!

ಎಂ.ಜಿ. ಉಮಾ, ಬಳ್ಳಾರಿ
ಎಲ್ಲರೂ ಸಿಟ್ಟು ತೋರಿಸುವುದು ಊಟದ ಮುಂದೆ. ಏಕೆ?
ಉಪ್ಪಾಸ್ಸಿದ್ದು ನಮ್ಮನ್ನಾಯ್ಲೋಕ್ಕಿಂತ ತಿಂದ್ಬಾಯಿ ಅಂತ ಬಲವಂತ ಮಾಡ್ತಾರೇಂತ ಗೊತ್ತಿರೋದ್ರಿಂದ.

ಗಂಜಾಂ ನಾಗರಾಜ, ಮೈಸೂರು
ಪ್ರಶ್ನೆಗಳಿಗಾಗಿ ಅಕ್ಷಯಪಾತ್ರೆಯನ್ನೇ ಇಟ್ಟಿರುವ ಹಾಗಿದೆ?
ಅದು ಈಕಡೆ. ಆಕಡೆ ತಳವಿಲ್ಲದ ಕಸದಬುಟ್ಟಿ!

ದೇವೇಂದ್ರ, ಕಡೂರು
ಸಮಯ ಕೆಟ್ಟರೆ ನಮ್ಮ ಹಿತೈಷಿಗಳು ನಮಗೆ ದ್ರೋಹಿಗಳಾಗಿ ಬಿಡುತ್ತಾರಲ್ಲಾ?
'ಕೆಟ್ಟರೆ' ಅಲ್ಲ, ಕೊಟ್ಟರೆ!

## ವಾರದ ಪ್ರಶ್ನೆ

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
ದೊಡ್ಡ ಆಲದಮರದ ಭಾರವನ್ನು ಭೂಮಿ ಹೇಗೆ ತಡೆಯುತ್ತದೆ?
ಬಿಳಲುಗಳನ್ನು ಗಟ್ಟಿಯಾಗಿ ತಬ್ಬಿಕೊಂಡು.

ಸುಶೀಲಾ ಎಸ್. ಪಾಟೀಲ
ದೇವರು ಎನ್ನುವುದು ಪುಲ್ಲಿಂಗವೇ ಅಥವಾ ಸ್ತ್ರೀಲಿಂಗವೇ?
ಬಹಳ pulling ಇರುವ ಆತ್ಮಲಿಂಗ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಬದುಕುವ ರೀತಿ, ಬರಹದ ರೀತಿ ಬೇರೆಬೇರೆ ಎಂದು ತಿಳಿದುಕೊಳ್ಳುವುದಿಲ್ಲವಲ್ಲಾ...?
ಆರ್.ಕೆ. ನಾರಾಯಣ್, ಡಿವಿಜಿ, ಕುವೆಂಪು, ಕಾರಂತ ಅವರಂಥವರನ್ನು ಕಂಡರೆ ಅವು ಬೇರೆಬೇರೆ ಅನ್ನಿಸುವುದಿಲ್ಲವಲ್ಲ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಹಗಲಿಗೂ ರಾತ್ರಿಗೂ ಏನು ವ್ಯತ್ಯಾಸ?



ಸುಮಾರು ಹನ್ನೆರಡು ಸಾವಿರ ಕಿಲೋಮೀಟರ್. ಇತ್ತ ಹಗಲಿದ್ದಾಗ ಅತ್ತ ರಾತ್ರಿ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಕುರಿ, ಕೋಣ, ಕೋಳಿಗಳನ್ನು ಬಲಿ ಕೊಡುವಂತೆ ಸಿಂಹ, ಹುಲಿಗಳನ್ನು ಬಲಿ ಕೊಡುವುದಿಲ್ಲವಲ್ಲ?
ಏಮಾರಿದರೆ ಇವರೇ ಬಲಿಯಾಗುವ ಭಯವಂತೆ.

ಕೃಷ್ಣಪ್ರಸಾದ್, ಬೆಂಗಳೂರು
ಸಂಘಗಳಲ್ಲಿ ಜವಾಬ್ದಾರಿ ತಪ್ಪಿಸಿಕೊಂಡು ರಾಜಕೀಯ ಮಾಡುವವರನ್ನು ಏನೆನ್ನಬೇಕು?
ಟಗರಿನಂತಹ ವ್ಯಕ್ತಿಯಾದ್ದರಿಂದ ಸಂಘ–ಮೇಷ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ರಾಜಕೀಯ ತಕ್ಕಡಿ ಇದ್ದಂತೆ. ಮಂತ್ರಿಮಂಡಲ?
ಕೆಲವರಂತೂ – ಬೆಪ್ಪುತಕ್ಕಡಿ.

■ ರಾಮ್